ಶ್ರೀ ಧರ್ಮಸಿಂಗ್ :- ಅದನ್ನೂ ಬೇಕಾದರೆ ಎಂದಲ್ಲ. ಲಂಬಾಣಿ ತಾಂಡಾಕ್ಕೆ ಗ್ರಾಮ ಎಂದು ಮಾಡಬೇಕಾದರೆ ನೀವು ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆಯಲೇಬೇಕು. ನಾನೂ ಕೂಡ ಎಸ್. ಬಿ. ಚೌವಾಣ್‌ರವರನ್ನು ಭೇಟಿ ಮಾಡಿ ಕಾನೂನು ಇಲಾಖೆಯ ಸಿಬ್ಬಂದಿ ಮತ್ತು ನಾವು ಹೋಗಿ ಇದರ ಬಗ್ಗೆ ಮಾತನಾಡಿದ್ದೇವೆ.

ಶ್ರೀ ರಮೇಶ್ ಸಿ. ಜಿಗಜಿಣಗಿ :- ಮಾನ್ಯ ಉಪಾಧ್ಯಕ್ಷರೇ, ಆದಷ್ಟು ಬೇಗ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ವಿಷಯ :- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಕೃತಿ ವಿಕೋಪಕ್ಕೆ ಬಿಡುಗಡೆಯಾದ ಹಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 239 (1634)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಪ್ರಕೃತಿ ವಿಕೋಪಕ್ಕೆ ದಕ್ಷಿಣ ಕನ್ನಡ ಜಿಲ್ಲೆಗೆ ಬಿಡುಗಡೆಯಾದ ಹಣವೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಆ) ಕಳೆದ ಒಂದು ವರ್ಷದಿಂದೀಚೆಗೆ ಬಿಡುಗಡೆಯಾದ ಹಣವೆಷ್ಟು? ಖರ್ಚಾದ ಹಣವೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :-

ಅ) 1996-97 ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಪ್ರಕೃತಿ ವಿಕೋಪ ಪರಿಹಾರ ಕಾರ್ಯಗಳಿಗೆ ರೂ.30-00 ಲಕ್ಷಗಳನ್ನು ಬಿಡುಗಡೆ ಮಾಡಿದೆ. ಅಲ್ಲದೇ, ಜಿಲ್ಲಾಧಿಕಾರಿಗಳ ಬಳಿ ಪ್ರಾರಂಭಿಕ ಶಿಲ್ಕು ರೂ.31-00 ಲಕ್ಷಗಳು ಲಭ್ಯವಿತ್ತು.

ತಾಲ್ಲೂಕುವಾರು ಅನುದಾನ ಹಂಚಿಕೆಯ ವಿವರ ಕೆಳಕಂಡಂತಿದೆ :

ಕ್ರ.ಸಂ.	ತಾಲ್ಲೂಕಿನ ಹೆಸರು	ಮೊಬಲಗು ರೂ. ಲಕ್ಷಗಳಲ್ಲಿ
1.	ಮಂಗಳೂರು	7-00
2.	ಪುತ್ತೂರು	3-00
3.	ಸುಳ್ಯ	2-00
4.	ಬಂಟ್ವಾಳ	4-00
5.	ಬೆಳ್ತಂಗಡಿ	4-00
6.	ಕುಂದಾಪುರ	5-00
7.	ಉಡುಪಿ	5-00
8.	ಕಾರ್ಕಳ	3-00
	ಒಟ್ಟು	33-00

ಅ) (1) ಕಳೆದ ಒಂದು ವರ್ಷದಲ್ಲಿ
ಬಿಡುಗಡೆಯಾದ ಹಣ ರೂ. 207.02 ಲಕ್ಷ

(2) ಕಳೆದ ಒಂದು ವರ್ಷದಲ್ಲಿ
ವೆಚ್ಚವಾದ ಹಣ ರೂ. 174-92 ಲಕ್ಷ

(ತಾಲ್ಲೂಕುವಾರು ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ.)

ಅನುಬಂಧ-1

ಕಳೆದ ಒಂದು ವರ್ಷದಿಂದೀಚೆಗೆ (1-6-95 ರಿಂದ 30-6-96 ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಕೃತಿ ವಿಕೋಪ ಪರಿಹಾರ ಕಾರ್ಯಕ್ರಮದಡಿ ಬಿಡುಗಡೆಯಾದ ಮತ್ತು ಖರ್ಚುಮಾಡಿದ ಮೊಬಲಗಿನ ತಾಲ್ಲೂಕುವಾರು ವಿವರಗಳು (ರೂ.ಲಕ್ಷಗಳಲ್ಲಿ)

ಕ್ರಮಸಂಖ್ಯೆ	ತಾಲ್ಲೂಕಿನ ಹೆಸರು	ಬಿಡುಗಡೆಯಾದ ಮೊಬಲಗು	ವೆಚ್ಚದ ವಿವರಗಳು		
			ಕುಡಿಯುವ ನೀರಿನ ಬಗ್ಗೆ	ಪ್ರವಾಹ ಪರಿಹಾರ ಬಗ್ಗೆ	ಒಟ್ಟು
1.	ಮಂಗಳೂರು	76.37	47.89	21.48	69.37
2.	ಬಂಟ್ವಾಳ	17.45	6.02	12.52	19.44
3.	ಪುತ್ತೂರು	10.45	9.20	5.25	14.45
4.	ಸುಳ್ಯ	23.44	6.30	2.00	8.30
5.	ಬೆಳ್ತಂಗಡಿ	14.20	5.00	5.00	10.20
6.	ಕುಂದಾಪುರ	19.43	8.76	5.54	14.30
7.	ಉಡುಪಿ	23.76	7.22	11.57	18.79
8.	ಕಾರ್ಕಳ	23.07	9.56	10.51	20.07
	ಒಟ್ಟು	207.92	101.05	73.87	174.92

ಶ್ರೀ ಕೆ. ಪ್ರತಾಪ್ ಚಂದ್ರ ಶೆಟ್ಟಿ :– ಮಾನ್ಯ ಉಪಾಧ್ಯಕ್ಷರೇ, ಪ್ರಕೃತಿ ವಿಕೋಪಕ್ಕೆ ಸಂಬಂಧಪಟ್ಟಂತೆ ದಕ್ಷಿಣ ಕನ್ನಡ ಜಿಲ್ಲೆಗೆ ಬಿಡುಗಡೆಯಾದ ಹಣದ ಬಗ್ಗೆ ನಾನು ಪ್ರಶ್ನೆ ಕೇಳಿದ್ದೆ. ದಕ್ಷಿಣ ಕನ್ನಡ ಜಿಲ್ಲೆಗೆ 30 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಆಲ್ಲದೇ ಜಿಲ್ಲಾಧಿಕಾರಿಗಳ ಬಳಿಯಲ್ಲಿ ಆರಂಭಿಕ ಶಿಲ್ಕು 31 ಲಕ್ಷ ಇದೆ ಎನ್ನುವ ವಿಚಾರವನ್ನು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಇವರು ಒದಗಿಸಿರುವ ಉತ್ತರದಲ್ಲಿ ಇರುವ ಅಂಕಿ ಅಂಶಗಳ ಪ್ರಕಾರ ಒಂದಕ್ಕೊಂದು ಹೊಂದಾಣಿಕೆಯೇ ಇಲ್ಲ.

ನೀವು ಬಿಡುಗಡೆ ಮಾಡಿರುವ ಹಣಕ್ಕಿಂತಲೂ ಜಾಸ್ತಿ ಖರ್ಚಾಗಿದೆ. ಆ ಖರ್ಚು ಹೆಚ್ಚಿಗೆ ಹೇಗೆ ಆಗಲು ಸಾಧ್ಯ? ನೀವು ಅಂಕಿ ಸಂಖ್ಯೆಯನ್ನು ಏನಾದರೂ ಸರಿಯಾಗಿ ನೋಡಿದ್ದೀರ? ಸ್ವಲ್ಪ ತಾವು ಓದಿ ನನಗೆ ತಿಳಿಸಿದರೆ ಒಳ್ಳೆಯದು. ಏಕೆಂದರೆ ತಾವು ಸರಿಯಾಗಿ ಓದಿಕೊಂಡು ಬಂದು ಇಲ್ಲಿ ಉತ್ತರ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಮಾನ್ಯ ಉಪಾಧ್ಯಕ್ಷರೇ, ಇದು ಸದನದಲ್ಲಿ ಉತ್ತರಿಸತಕ್ಕಂಥ ಪ್ರಶ್ನೆ. ಆದ್ದರಿಂದ ಸದನದಲ್ಲಿ ಉತ್ತರಿಸಬೇಕಾದರೆ ತಮಗೆ ಸಂಪೂರ್ಣ ಅರಿವು ಇರಬೇಕು, ಅದರ ಬಗ್ಗೆ ತಿಳಿವಳಿಕೆ ಇರಬೇಕು ಮತ್ತು ನಮಗೆ ಉತ್ತರ ಕೊಡತಕ್ಕಂಥ ಪರಿಸ್ಥಿತಿಯಲ್ಲಿ ತಾವು ಇರಬೇಕು. ಈಗ ತಾವು ಯಾವ ರೀತಿಯ ಉತ್ತರ ಕೊಡುತ್ತೀರೊ ಕೊಡಿ.

ಶ್ರೀ ರಮೇಶ್ ಸಿ. ಜಿಗಜಿಣಗಿ :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಏನು ಪ್ರಶ್ನೆಯನ್ನು ಕೇಳಿದ್ದಾರೆ ಅದಕ್ಕೆ ಈಗಾಗಲೇ ಉತ್ತರವನ್ನು ಒದಗಿಸಿದ್ದೇನೆ. ಆದರೆ ಹಣ ಸ್ವಲ್ಪ ಜಾಸ್ತಿ ಖರ್ಚಾಗಿದೆ, ಜವಾಬ್ದಾರಿಯಿಂದ ಉತ್ತರ ಕೊಡಬೇಕು ಎಂದಿದ್ದಾರೆ ಅಷ್ಟೇ ಜವಾಬ್ದಾರಿಯಿಂದ ಸರ್ಕಾರದ ಪರವಾಗಿ ನಾನು ಇಲಾಖಾ ಮುಖೇನ ಅವರಿಗೆ ಉತ್ತರ ಒದಗಿಸಿದ್ದೇನೆ. ಆದರೆ ಹೆಚ್ಚು ಹಣ ಖರ್ಚಾಗಿದೆ ಎಂದು ಅವರು ಹೇಳುತ್ತಾರೆ, ಕೆಲವೊಂದು ವಿಚಾರಗಳಲ್ಲಿ ಹೆಚ್ಚು ಹಣ ಖರ್ಚು ಮಾಡಲು ಜಿಲ್ಲಾಧಿಕಾರಿಗಳಿಗೆ ಡಿಸ್ಕ್ರಿಷನರಿ ಪವರ್ ಇರುತ್ತದೆ. ಈಗ ಯಾವುದೋ ಒಂದು ರಸ್ತೆಯನ್ನು ಅವಶ್ಯವಾಗಿ ಮಾಡಲೇಬೇಕಾಗಿರುತ್ತದೆ ಆಗ ಆಯಿತಪ್ಪಾ ರಸ್ತೆಯನ್ನು ಮಾಡು ಆಮೇಲೆ ಬಿಲ್ ಮಾಡೋಣ ಎನ್ನತಕ್ಕಂಥ ರೀತಿಯಲ್ಲಿ ಕೆಲವೊಂದು ಇರುತ್ತವೆ. ಇದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಬೇಕಾದರೆ ಜಿಲ್ಲಾಧಿಕಾರಿಗಳು ಇಂಥ ಅಕೌಂಟಿನ ಕೆಳಗಡೆ ಅಥವಾ ಸ್ಕೇರ್ಸಿಟಿಗೆ ಹಣದ ಕೊರತೆ ಇದೆ ಎಂದು ಸರ್ಕಾರಕ್ಕೆ ತಿಳಿಸಿದರೆ ಆ ಹಣವನ್ನು ಬಿಡುಗಡೆ ಮಾಡಲಿಕ್ಕೆ ಕೂಡ ನಾವು ಸಿದ್ಧರಿದ್ದೇವೆ ಎಂದು ಸದನದ ಮೂಲಕ ತಿಳಿಸಬಯಸುತ್ತೇನೆ.

ಶ್ರೀ ಕೆ. ಪ್ರತಾಪ್ ಚಂದ್ರ ಶೆಟ್ಟಿ :- ಮಾನ್ಯ ಉಪಾಧ್ಯಕ್ಷರೇ, ನಾನು ಈ ಮಾತನ್ನು ಏಕೆ ಹೇಳಿದೆ ಎಂದರೆ, ಅನುಬಂಧ 1 ರಲ್ಲಿ ಬಂಟ್ವಾಳ ತಾಲ್ಲೂಕಿಗೆ ಬಿಡುಗಡೆಯಾದ ಹಣ ರೂ. 17.45 ಆದರಲ್ಲಿ ಒಟ್ಟು ಖರ್ಚಾಗಿರುವ ಹಣ 19.44 ಗಳಾಗಿದೆ, ಇದು ಹೇಗೆ ಸಾಧ್ಯ? ಅದೇ ರೀತಿಯಲ್ಲಿ ಪುತ್ತೂರಿಗೆ ಬಿಡುಗಡೆಯಾದ ಹಣ 10.45 ಆದರೆ ಖರ್ಚಾಗಿರುವ ಹಣ 14.45 ಈ ರೀತಿಯಲ್ಲಿರುವುದಕ್ಕೆಲ್ಲಾ ಯಾರು ಉತ್ತರ ಕೊಡಬೇಕಾದುದು? ನನ್ನ ಪ್ರಶ್ನೆ ಏನೆಂದರೆ ಬಿಡುಗಡೆಯಾದ ಹಣಕ್ಕಿಂತ ಹೆಚ್ಚು ಹಣವನ್ನು ಖರ್ಚು ಮಾಡುವುದಕ್ಕೆ ಆಗುತ್ತದೆಯೇ? ಎರಡನೆಯದಾಗಿ, ಪ್ರಕೃತಿ ವಿಕೋಪಕ್ಕಾಗಿ ನಾವು ಜಿಲ್ಲೆಗಳಿಗೆ ಹಣವನ್ನು ಬಿಡುಗಡೆ ಮಾಡುತ್ತೇವೆ. ತಾವು ಅಲ್ಲಿಯ ಪರಿಸ್ಥಿತಿ ಗನುಗುಣವಾಗಿ ಹಣವನ್ನು ಬಿಡುಗಡೆ ಮಾಡಿದರೆ ಅದು ಸುಸೂತ್ರವಾಗಿ ಆಗುತ್ತದೆ. ಈ ವರ್ಷದಲ್ಲಿ ಆದ ಹಾನಿಗೆ ಮುಂದಿನ ವರ್ಷ ಪರಿಹಾರವನ್ನು ಕೊಡುವುದು ಎಷ್ಟು ಸೂಕ್ತ? ಈ ಬಗ್ಗೆ ತಾವು ಆದಂಥ ಹಾನಿಗೆ ಮತ್ತು ಕೊಡತಕ್ಕಂಥ ಪರಿಹಾರಗಳು ವಿಳಂಬವಾಗುತ್ತಿದೆ, ಕೊಡಬೇಕಾದವರಿಗೆ ಸಕಾಲದಲ್ಲಿ ಕೊಡುತ್ತಿಲ್ಲ. ನಮ್ಮ ಕೆ.ಡಿ.ಬಿ.

ಸಭೆಯಲ್ಲಿ ಒಂದು ಪತ್ರವನ್ನು ನಮಗೆ ಕೊಟ್ಟಿದ್ದರು. ಆದರಲ್ಲಿ ಒಂದು ವಿಚಾರವನ್ನು ಹೇಳಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 710 ಮನೆಗಳು ಮತ್ತು 7 ಜೀವಹಾನಿ ಆಗಿರುವುದರಿಂದ ಒಂದು ಕೋಟಿ 93 ಲಕ್ಷ ರೂಪಾಯಿಗಳ ಖಾಸಗೀ ಮತ್ತು ಸಾರ್ವಜನಿಕ ಆಸ್ತಿಗಳ ಒಟ್ಟು ಲುಕ್ಸಾನು ಆಗಿದೆ. ಆದರೆ ಈವರೆಗೆ ಪರಿಹಾರ ರೂಪದಲ್ಲಿ 30 ಲಕ್ಷ ರೂಪಾಯಿಗಳನ್ನು ಅನುದಾನದಲ್ಲಿ ಬಿಡುಗಡೆಯಾಗಿದೆ. ಅದಲ್ಲದೇ 31 ಲಕ್ಷ ರೂಪಾಯಿಗಳನ್ನು ಬದಲಿ ಪರಿಹಾರ ನಿಧಿಯಿಂದ ವರ್ಗಾಯಿಸಲಾಗಿದ್ದು ಇನ್ನೂ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿದೆ ಎನ್ನತಕ್ಕಂಥ ಉತ್ತರವನ್ನು ಅಲ್ಲಿ ಅವರು ಹೇಳಿದ್ದಾರೆ. ಇಲ್ಲಿ ನೀವು ಕೊಟ್ಟರತಕ್ಕಂಥ ಉತ್ತರದಲ್ಲಿ ನಿಮ್ಮ ಮತ್ತು ನಮ್ಮ ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಇನ್ನೂ 33 ಲಕ್ಷ ರೂಪಾಯಿ ಗಳು ಇದೆ ಎನ್ನತಕ್ಕಂಥ ಉತ್ತರ ಬಂದಿದೆ. ಇಲ್ಲಿ ನೀವು ಕೊಟ್ಟಿರತಕ್ಕಂಥ ಉತ್ತರಗಳು ಸಮರ್ಪಕವಾಗಿಲ್ಲ, ತಾವು ಪರಿಶೀಲನೆ ಮಾಡಿ ಈ ಪ್ರಶ್ನೆಯನ್ನು ಮುಂದೂಡಿದರೆ ಒಳ್ಳೆಯದು. ಇಲ್ಲದಿದ್ದರೆ ನೀವು ಉತ್ತರ ಕೊಟ್ಟರೂ ಪರವಾಗಿಲ್ಲ.

ಶ್ರೀ ರಮೇಶ್ ಸಿ. ಜಿಗಜಿಣಗಿ :- ಮಾನ್ಯ ಉಪಾಧ್ಯಕ್ಷರೇ, ಈಗ ನಾವು ಸರ್ಕಾರದಿಂದ ಸ್ಕೇರ್‌ಸಿಟಿ ಹಣವನ್ನು ಬಿಡುಗಡೆ ಮಾಡಬೇಕಾದರೆ ಪುತ್ತೂರು ತಾಲ್ಲೂಕಿಗೆ 2 ಲಕ್ಷ ರೂಪಾಯಿ ಜೀರ್ಗಿಗೆ 10 ಲಕ್ಷ ರೂಪಾಯಿ ಎಂದು ಮಾಡುವುದಿಲ್ಲ. ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಅಲ್ಲಿಯ ಪರಿಸ್ಥಿತಿಗೆ ಅನುಗುಣವಾಗಿ ಏನು ಹಣ ಕೇಳುತ್ತಾರೆ ಅದನ್ನು ನಾವು ಬಿಡುಗಡೆ ಮಾಡುತ್ತೇವೆ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ :- ಅದು ನನಗೆ ಗೊತ್ತು. ತಾವು ನೇರವಾಗಿ ಹೇಳಬೇಕು.

ಉಪಾಧ್ಯಕ್ಷರು :- ಅವರು ಉತ್ತರ ಹೇಳುವವರೆಗೂ ತಾವು ಕುಳಿತುಕೊಂಡು ಕೇಳಿ.

ಒಬ್ಬ ಮಾನ್ಯ ಸದಸ್ಯರು :- ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಮಂತ್ರಿಗಳು ಉತ್ತರ ಹೇಳಬೇಕಾದರೆ ಸಮಾಧಾನ ಬೇಡವೆ?

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ :- ಅವರಿಗೆ ಸಮಾಧಾನ ಮಾಡುವುದಕ್ಕೆ ನಾವು ಬಂದಿರುವುದಿಲ್ಲ. ನಾವು ಪ್ರಶ್ನೆ ಕೇಳುತ್ತಿದ್ದೇವೆ, ಅದಕ್ಕೆ ಅವರು ಉತ್ತರ ಕೊಡಬೇಕು.

ಉಪಾಧ್ಯಕ್ಷರು :- ಪ್ರತಾಪ ಚಂದ್ರ ಶೆಟ್ಟಿಯವರೇ, ತಾವು ಭಾಷಣ ಮಾಡ ತಕ್ಕಂಥಾದ್ದು ಅಲ್ಲ. ತಾವು ಪ್ರಶ್ನೆಯನ್ನು ಕೇಳಿದ್ದೀರಿ, ಅವರು ಉತ್ತರ ಹೇಳುತ್ತಾರೆ, ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ :- ಮಾನ್ಯ ಉಪಾಧ್ಯಕ್ಷರೇ, ತಾಲ್ಲೂಕಿಗೆ ಹಣ ಬಿಡುಗಡೆ ಮಾಡುತ್ತಾರೆ, ಜಿಲ್ಲೆಗೆ ಹಣ ಬಿಡುಗಡೆ ಮಾಡುತ್ತಾರೆ ಎನ್ನುವುದು

ನಮಗೆ ಗೊತ್ತಿಲ್ಲವೇ? ನಾನು ಕೇಳುತ್ತಿರುವುದು ತಾವು ಜಿಲ್ಲೆಯಿಂದ ಬಿಡುಗಡೆ ಮಾಡಿರತಕ್ಕಂಥ ಹಣ ಸಮರ್ಪಕವಾಗಿಲ್ಲ. ಮತ್ತು ತಾವು ಹೇಳಿರತಕ್ಕಂಥ ಅಂಕಿ ಅಂಶಗಳು ಒಂದಕ್ಕೊಂದು ಹೊಂದಾಣಿಕೆ ಇಲ್ಲ. ಮತ್ತು ಬಿಡುಗಡೆ ಮಾಡತಕ್ಕಂಥ ಹಣವನ್ನು ಸಕಾಲದಲ್ಲಿ ಬಿಡುಗಡೆ ಮಾಡಬೇಕು. ತಾವು ಕೊಟ್ಟಂತಹ ಉತ್ತರದಲ್ಲಿ 33 ಲಕ್ಷ ರೂಪಾಯಿ ಜಿಲ್ಲಾಧಿಕಾರಿಗಳ ಹತ್ತಿರ ಇದೆ ಎಂದು ವರದಿಯನ್ನು ಕೊಟ್ಟಿದ್ದೀರಿ. ಆದರೆ ಜಿಲ್ಲಾಧಿಕಾರಿಗಳ ಕಚೇರಿಯಿಂದ ಬಂದಂತಹ ಪತ್ರದಲ್ಲಿ ಒಂದು ಕೋಟಿ ರೂಪಾಯಿ ಹಣ ಬಿಡುಗಡೆ ಆಗಬೇಕಾಗಿದೆ ಎಂದು ಪತ್ರ ಬರೆದಿದ್ದಾರೆ.

ಉಪಾಧ್ಯಕ್ಷರು :- ತಾವು ಭಾಷಣ ಮಾಡುವ ಹಾಗೆ ಇಲ್ಲ. ಪ್ರಶ್ನೆ ಕೇಳಬೇಕು. ತಾವು ಭಾಷಣ ಮಾಡುತ್ತಿದ್ದರೆ ಹೇಗೆ? ಈಗಾಗಲೇ ಒಂದುಗಂಟೆ ಹದಿನೈದು ನಿಮಿಷವಾಗಿದೆ. ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ, ದಯವಿಟ್ಟು ತಾವು ಕುಳಿತುಕೊಂಡು ಕೇಳಿ. ತಾವು ದೀರ್ಘವಾಗಿ ಮಾತನಾಡುತ್ತಾ ಹೋದರೆ ಹೇಗೆ ಆಗುತ್ತದೆ? ಅವರು ಉತ್ತರ ಹೇಳುತ್ತಾರೆ ಸಂಯಮದಿಂದ ಕೇಳಿ.

ಶ್ರೀ ಕೆ. ಜಯರಾಂ ಶೆಟ್ಟಿ :- ಮಾನ್ಯ ಉಪಾಧ್ಯಕ್ಷರೇ, 1994-95 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆರೆ ಹಾವಳಿಯಿಂದಾಗಿ ಬೆಳೆ ಹಾನಿಯಾಗಿದೆ. ಒಂದು ಎಕರೆಗೆ 200 ರೂಪಾಯಿಯಂತೆ ಸರ್ಕಾರ ಗ್ರಾಂಟ್ ಮಾಡಿದೆ. ಆದರೆ ಜಿಲ್ಲಾಧಿಕಾರಿ ಕಚೇರಿಯಿಂದಾಗಲಿ ಅಥವಾ ಕೃಷಿ ಇಲಾಖೆಯಿಂದ ಆಗಲಿ ಇದುವರೆಗೂ ಹಣ ಬಿಡುಗಡೆಯಾಗಿಲ್ಲ. ಮತ್ತು ಬರ ಪರಿಹಾರದ ಬಗ್ಗೆ ಕುಡಿಯುವ ನೀರಿಗಾಗಿ ಜಿಲ್ಲಾಧಿಕಾರಿಗಳಿಗೆ ಅನುದಾನ ಕೊಟ್ಟಿದೆ ಅದನ್ನು ಅವರು ನಿರ್ದಿಷ್ಟ ಕ್ರಮದಲ್ಲಿ ಬಿಡುಗಡೆ ಮಾಡುತ್ತಾ ಇಲ್ಲ. ಅದು ಎಲ್ಲರಿಗೂ ಸಿಗುತ್ತಾ ಇಲ್ಲ. ಆದುದರಿಂದ ನಾನು ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ :- ಮಾನ್ಯ ಉಪಾಧ್ಯಕ್ಷರೇ, ಸ್ಕೋರ್‌ಸಿಟಿಯಲ್ಲಿ ಸರ್ಕಾರದಿಂದ ಬಿಡುಗಡೆ ಆಗತಕ್ಕಂಥ ಹಣದ ಬಗ್ಗೆ ಹೇಳುವುದಾದರೆ, ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಇರುತ್ತದೆ. ಆ ಸಮಿತಿಯವರು ಜಿಲ್ಲಾಧಿಕಾರಿಗಳಿಂದ ಆ ಸನ್ನಿವೇಶವನ್ನು ನೋಡಿಕೊಂಡು ಏನೇನು ವರದಿ ಬಂದಿರುತ್ತದೋ ಉದಾಹರಣೆಗೆ ಶಿವಮೊಗ್ಗದ ಡೆಪ್ಯೂಟಿ ಕಮಿಷನರ್‌ರವರು ಒಂದು ಕೋಟಿ ರೂಪಾಯಿ ಹಣ ಕೇಳಿದರೆ ಅವರೇ ಕುಳಿತುಕೊಂಡು ತೀರ್ಮಾನ ಮಾಡಿ ಬಿಜಾಪುರ, ಗುಲ್ಬರ್ಗ ಅಥವಾ ಬೆಳಗಾಂ ಜಿಲ್ಲಾಧಿಕಾರಿಗಳಿಗೆ ಒಟ್ಟಾರೆ ಹಣವನ್ನು ಕೊಟ್ಟುಕಳುಹಿಸುತ್ತಾರೆ. ಆ ಜಿಲ್ಲೆಯಲ್ಲಿ ಇರತಕ್ಕಂಥ ಎಲ್ಲಾ ತಾಲ್ಲೂಕುಗಳಲ್ಲಿ ಒಂದು ಕುಡಿಯುವ ನೀರಿನ ತೊಂದರೆ ಇರಬಹುದು, ಬೆಂಕಿ ಅನಾಹುತವಾಗಿರಬಹುದು, ಈ ಎಲ್ಲಾ ಸನ್ನಿವೇಶಗಳನ್ನು ನೋಡಿಕೊಂಡು ಅಲ್ಲಿರತಕ್ಕಂಥ ಡಿ.ಸಿ.ಯವರು ಬೇರೆ ಬೇರೆ ತಾಲ್ಲೂಕುಗಳಿಗೆ ಹಣವನ್ನು ಕೊಡುತ್ತಾರೆ ಎನ್ನುವುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಮತ್ತು ಇಲ್ಲಿರತಕ್ಕಂಥ ಅಂಕಿ ಅಂಶಗಳು ಬಹಳ ವ್ಯತ್ಯಾಸವಿದೆ ಎಂದು ಹೇಳುತ್ತಾರೆ. ಆದರೆ

ಡಿ.ಸಿ. ಒಂದುಸಲ ಏನು ಮಾಡುತ್ತಾರೆ ಎಂದರೆ ಪ್ರಾರಂಭಿಕ ಶಿಲ್ಕುವಿನಲ್ಲಿ ಇರುವಂತಹ ಹಣವನ್ನು ಖರ್ಚು ಮಾಡುತ್ತಾರೆ. ಆಗ ಇಂತಹ ಒಂದು ಅಂಕಿ ಅಂಶಗಳ ತಾರತಮ್ಯವಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ :– ಇಲ್ಲಿ ಒಂದು ಕೊರತೆ ಇದೆ. ಹಣ ಸಕಾಲದಲ್ಲಿ ಬಿಡುಗಡೆ ಆಗಬೇಕಾದ್ದು ಆಗುತ್ತಾ ಇಲ್ಲ. ಅದಕ್ಕೆ ಉತ್ತರ ಸಿಕ್ಕಿಲ್ಲ. ಮತ್ತು ಹಣ ಇದ್ದು ಏಕೆ ಬಿಡುಗಡೆಯಾಗಿಲ್ಲ? ಏಕೆಂದರೆ ಜಿಲ್ಲಾಧಿಕಾರಿಗಳ ಪತ್ರದಲ್ಲಿ ಒಂದು ಕೋಟಿ ರೂಪಾಯಿ ಬೇಕು ಎಂದು ಹೇಳಿದ್ದಾರೆ ಮತ್ತು ಇವರ ಉತ್ತರದಲ್ಲಿ ಹಣ ಇದೆ ಎಂದು ಹೇಳಿದ್ದಾರೆ. ಈ ಹಣ ಬಿಡುಗಡೆ ಆಗದೇ ಇರುವುದಕ್ಕೆ ಕಾರಣವೇನು? ಇದಕ್ಕೆ ಉತ್ತರ ಕೊಡಬೇಕು. ಸನ್ಮಾನ್ಯ ಸಚಿವರು ಸ್ವಲ್ಪ ನೋಡಿ ಉತ್ತರ ಕೊಟ್ಟರೆ ಒಳ್ಳೆಯದು. ನೇರವಾಗಿ ಹೇಳಿದರೆ ಸರಿಯಾಗುವುದಿಲ್ಲ. ಒಂದು ಪ್ರಶ್ನೆ ಬರಬೇಕಾದರೆ ಬಹಳಷ್ಟು ಕಷ್ಟಪಡುತ್ತೇವೆ. 10 ಪ್ರಶ್ನೆಗಳನ್ನು ಹಾಕಬೇಕಾಗುತ್ತದೆ. 10 ರಲ್ಲಿ ಒಂದು ಕ್ಲಿಕ್ ಆಗುತ್ತದೆ.

ಶ್ರೀ ರಮೇಶ್ ಸಿ. ಜಿಗಜಿಣಗಿ :– ಈಗ ಮಂಗಳೂರು ಜಿಲ್ಲೆಯಲ್ಲಿ ದುಡ್ಡಿಲ್ಲ ಹೆಚ್ಚು ಖರ್ಚು ಮಾಡಿದ್ದಾರೆ, ಅದು ಅವರಿಗೆ ಸರಿಯಾಗಿ ಅರ್ಥ ಮಾಡುಕೊಳ್ಳುವುದಿಲ್ಲ. ಡಿ.ಸಿ.ಯವರು ಏನು ಹಣ ಖರ್ಚು ಮಾಡಿರುತ್ತಾರೆ ಅದನ್ನು ಪ್ರಾರಂಭಿಕ ಶಿಲ್ಕುವಿನಲ್ಲಿ ಖರ್ಚು ಮಾಡಿರುತ್ತಾರೆ. ಅದನ್ನು ತಿಳಿದುಕೊಳ್ಳಬೇಕು. ಈಗ ಮಂಗಳೂರಿಗೆ ಬಹಳ ಸ್ಕೇರ್‌ಸಿಟಿ ಇದೆ, ಅಲ್ಲಿ ಹೆಚ್ಚು ಮಳೆ ಬಂದು ಎಲ್ಲಾ ಹಾಳಾಗಿದೆ ಎಂದು ಹೇಳುತ್ತಾರೆ. ಆದರೆ ಜಿಲ್ಲಾಧಿಕಾರಿಗಳು ಏನು ಕಳುಹಿಸಿದ್ದಾರೆ ಅದನ್ನು ನೋಡುತ್ತೇನೆ, ಹಣ ಬೇಕು ಎಂದು ಡಿ.ಸಿ.ಯವರು ಹೇಳಿದರೆ ನಾವು ಹಣವನ್ನು ಬಿಡುಗಡೆ ಮಾಡಿಸುತ್ತೇವೆ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ :– ನಮಗೆ ಅರ್ಥ ಆಗುವುದಿಲ್ಲ ಎಂದು ಹೇಳಿದರು. ನೀವು ಅರ್ಥ ಮಾಡಿಕೊಂಡು ಓದಿ ಕನ್‌ವಿನ್ಸ್ ಮಾಡಿ.

ಉಪಾಧ್ಯಕ್ಷರು :– ತಾವು ಸಮಯ ತೆಗೆದುಕೊಂಡು ಅವರ ಕೊಠಡಿಗೆ ಹೋಗಿ ಅರ್ಥ ಆಗಲಿಲ್ಲ ಎಂದರೆ ಚರ್ಚೆ ಮಾಡಿ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ :– ನಾನು ಕೇಳತಕ್ಕಂಥಾದ್ದು ನೇರವಾಗಿ ನಿಮಗೆ ಅರ್ಥವಾಗುತ್ತಿಲ್ಲ. ಅದನ್ನು ಡಿವಿಜನಲ್ ಕಮೀಷನರ್ ಹತ್ತಿರ ಕೇಳಿ ಎನ್ನುವಂತಹುದು ಉತ್ತರ ಆಲ್ಲ. ನೀವು ಜವಾಬ್ದಾರಿಯುತ ಸಚಿವರು, ತಾವು ಏನು ಉತ್ತರ ಕೊಟ್ಟಿದ್ದೀರಿ ಆ ಉತ್ತರವನ್ನು ಕನ್‌ವಿನ್ಸ್ ಮಾಡಿ ಅರ್ಥ ಮಾಡಿ ಹೇಳ ಬೇಕಾಗುತ್ತದೆ. ಅಂಕಿಸಂಖ್ಯೆಯನ್ನ ನೀವು ಓದದೆ ಇಲ್ಲಿ ಬಂದು ಓದಿಕೊಂಡು ಹೇಳುತ್ತೀರಿ. ನಾನು ಕೇಳತಕ್ಕಂಥಾದ್ದು ಜಿಲ್ಲಾಧಿಕಾರಿಗಳ ಹತ್ತಿರ ಹಣ ಇದೆ. ಆದರೆ ಸಕಾಲದಲ್ಲಿ ಹಣ ಬಿಡುಗಡೆಯಾಗಿಲ್ಲ. ಎರಡನೆಯದು ಏಕೆ ಬಿಡುಗಡೆಯಾಗಿಲ್ಲ.

ಶ್ರೀ ರಮೇಶ್ ಸಿ. ಜಿಗಜಿಣಗಿ :- ಮಾನ್ಯ ಉಪಾಧ್ಯಕ್ಷರೇ, ಈಗ ಹೇಳಿದರು ಬಿಡುಗಡೆ ಆಗಿಲ್ಲ ಎಂದು, ಅವರು ಏನು ಕೇಳುತ್ತಿದ್ದಾರೆ?

ಒಬ್ಬ ಮಾನ್ಯ ಸದಸ್ಯರು :- ಮಾನ್ಯ ಉಪಾಧ್ಯಕ್ಷರೇ, 1994-95 ನೇ ಸಾಲಿನಲ್ಲಿ ಬೆಳೆ ಹಾನಿಯಾಗಿರುವ ಬಗ್ಗೆ ಇನ್ನೂ ಹಣ ಕೊಡಲಿಲ್ಲ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ :- ನಾನು ಇಲ್ಲಿ ಬಿಡುಗಡೆಯಾದ ಹಣವೆಷ್ಟು? ಖರ್ಚಾದ ಹಣವೆಷ್ಟು ಎಂದು ಕೇಳಿದ್ದೇನೆ. ಕಳೆದ ಒಂದು ವರ್ಷದಲ್ಲಿ ಮೆಚ್ಚಾದ ಹಣ 174.92 ಲಕ್ಷ ರೂಪಾಯಿ ಎಂದು ಇಲ್ಲಿ ಈ ಉತ್ತರವನ್ನು ಕೊಟ್ಟಿದ್ದೀರಿ. ಆದರೆ ಜಿಲ್ಲಾಧಿಕಾರಿಯವರು ಇನ್ನು ಒಂದುಕೋಟಿ ರೂಪಾಯಿ ಬೇಕು ಎಂದು ಪತ್ರ ಬರೆಯುತ್ತಾರೆ. ಇಲ್ಲಿ ಹಣ 33 ಲಕ್ಷ ರೂಪಾಯಿ ಉಳಿದಿದೆ. ಆದರೆ ಇನ್ನೂ ಒಂದು ಕೋಟಿ ರೂಪಾಯಿ ಬೇಕು ಎಂದು ಹೇಳುತ್ತಾರೆ, ಆದಕಾರಣ ನನಗೆ ಗೊಂದಲವಾಗಿದೆ. ನಿಮಗೆ ಗೊಂದಲವಾಗದೇ ಇದ್ದರೆ ತಾವು ಓದಿ ಉತ್ತರ ಕೊಟ್ಟರೆ ಒಳ್ಳೆಯದು.

ಶ್ರೀ ರಮೇಶ್ ಎಸ್. ಜಿಗಜಿಣಗಿ :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಸಭೆ ಮುಗಿದ ಮೇಲೆ ನನ್ನ ಕೊಠಡಿಗೆ ಬರಲಿ, ಅವರಿಗೆ ಏನು ಗೊಂದಲವಾಗಿದೆ, ಆ ಗೊಂದಲವನ್ನು ನಾನು ಪರಿಹಾರ ಮಾಡುತ್ತೇನೆ.

ಶ್ರೀ ಯು. ಆರ್. ಸಭಾಪತಿ :- ಮಾನ್ಯ ಉಪಾಧ್ಯಕ್ಷರೇ, ಕಳೆದ ವಿಧಾನ ಸಭೆಯ ಅಧಿವೇಶನದಲ್ಲಿ ಪ್ರಕೃತಿ ವಿಕೋಪಕದಲ್ಲಿ ಸಮುದ್ರ ತಡೆಗೋಡೆ ಯೋಜನೆಗೆ 50 ಲಕ್ಷ ರೂಪಾಯಿ ಮಂಜೂರಾತಿ ಆಗಿ ಅಲ್ಲಿ ಈಗಾಗಲೇ ಕಾಮಗಾರಿ ಕೆಲಸವಾಗಿದೆ, ಪ್ರಕೃತಿ ವಿಕೋಪ ವೆಚ್ಚದಲ್ಲಿ ಹಣ ಒದಗಿಸಲಾಗುತ್ತದೆ ಎಂದು ಮಾನ್ಯ ಕಂದಾಯ ಸಚಿವರು ಈ ಸದನದಲ್ಲಿ ಹೇಳಿದ್ದಾರೆ. ಆದರೆ ಈ ಪ್ರಕೃತಿ ವಿಕೋಪಕ್ಕೆ ಹಣ ವೆಚ್ಚ ಮಾಡಿದೆ ಎಂದು ಹೇಳುವುದರಲ್ಲಿ ಈ ಕಾಮಗಾರಿ ಕೆಲಸದ ಹಣ ಸೇರಿದೆಯೋ ಅಥವಾ ಇಲ್ಲವೋ? ಒಂದು ವೇಳೆ ಸಮುದ್ರ ತಡೆಗೋಡೆಗೆ ಈ ಹಣವನ್ನು ಸೇರಿಸದೇ ಇದ್ದರೆ ಕಳೆದ ಬಾರಿ ಸದನದಲ್ಲಿ ಕಂದಾಯ ಸಚಿವರು ಯಾವ ಬರವಸೆಗಳನ್ನು ಕೊಟ್ಟಿದ್ದಾರೋ ಅದನ್ನು ಈಡೇರಿಸಿಲ್ಲ ಎಂದು ಹೇಳಿದ ಹಾಗೆ ಆಯಿತು. ಹಾಗಾದರೆ ಅದನ್ನು ಯಾವಾಗ ಈಡೇಸುತ್ತೀರಾ? ಆ ಹಣ 1995-96 ನೇ ಸಾಲಿನಲ್ಲಿ ಸುಮಾರು 30 ಲಕ್ಷ ರೂಪಾಯಿಯಷ್ಟು ಇದೆ. 1996-97 ನೇ ಸಾಲಿನಲ್ಲಿ ಸುಮಾರು ಒಂದು ಕೋಟಿ ರೂಪಾಯಿಯಷ್ಟು ಆಗಿದೆ. ಈ ಹಣವನ್ನು ಪ್ರಕೃತಿ ವಿಕೋಪದ ಹಣದಲ್ಲಿ ಬಿಡುಗಡೆ ಮಾಡುತ್ತೇವೆ ಎಂದು ಹಿಂದಿನ ಕಂದಾಯ ಸಚಿವರು ಹೇಳಿದ್ದಾರೆ. ಈಗ ಅದನ್ನು ಮಾಡುತ್ತಿರೋ ಇಲ್ಲವೋ?

ಶ್ರೀ ರಮೇಶ್ ಎಸ್. ಜಿಗಜಿಣಗಿ :- ಮಾನ್ಯ ಉಪಾಧ್ಯಕ್ಷರೇ, ಸಭಾಪತಿ ಯವರು ಹೇಳಿರತಕ್ಕಂಥ ಪ್ರಶ್ನೆಗೆ ಮಾಹಿತಿ ಈಗ ಸಧ್ಯಕ್ಕೆ ನನ್ನ ಹತ್ತಿರ ಲಭ್ಯವಿಲ್ಲ. ಅವರ ಪ್ರಶ್ನೆಗೆ ಉತ್ತರವನ್ನು ತರಿಸಿಕೊಂಡು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ :- ಮಾನ್ಯ ಉಪಾಧ್ಯಕ್ಷರೇ, ಆದರಲ್ಲಿ ಸ್ಪಷ್ಟೀಕರಣ ಕೊಡಬೇಕು. ಇದರಲ್ಲಿ ತಾವು ಏನು ಪರಿಹಾರ ಕೊಡುತ್ತೀರಿ? ಉಪಾಧ್ಯಕ್ಷರೇ, ನನಗೆ ಮಾತನಾಡಲು ಒಂದ ಅವಕಾಶ ಕೊಡಿ.

ಉಪಾಧ್ಯಕ್ಷರು :- ನಾನು ನಿಮಗೆ ಅವಕಾಶ ಕೊಟ್ಟಿಲ್ಲ, ತಾವು ಕುಳಿತುಕೊಳ್ಳಿ.

ವಿಷಯ :- 'ಡಿ'ವರ್ಗದ ನೌಕರರಿಗೆ ರಿಯಾಯತಿ ದರದಲ್ಲಿ ನಿವೇಶನಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 240 (317)

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) :- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರದವರು ಡಿ ವರ್ಗದ ನೌಕರರಿಗೆ 50,000 ನಿವೇಶನಗಳನ್ನು ರಿಯಾಯಿತಿ ದರದಲ್ಲಿ ನೀಡಲು ನಿರ್ಧಾರ ತೆಗೆದುಕೊಂಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಈ ಯೋಜನೆಗೆ ನಿಗಧಿ ಪಡಿಸಿದ ಮೊತ್ತವೆಷ್ಟು?

ಇ) 31-3-96 ರೊಳಗೆ ಎಷ್ಟು ನಿವೇಶನಗಳನ್ನು ಹಂಚಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :-

ಅ) ಹೌದು. ರಾಜ್ಯ ಸರ್ಕಾರದಲ್ಲಿ ಡಿ ದರ್ಜೆಯ ವಸತಿ : ನಿವೇಶನ ರಹಿತ ನೌಕರರಿಗೆ ಶೇಕಡ 50 ರ ರಿಯಾಯಿತಿ ಬೆಲೆಯಲ್ಲಿ ನಿವೇಶನಗಳನ್ನು ಒದಗಿಸಲು ಸರ್ಕಾರ ನಿರ್ಧರಿಸಿದೆ.

ಆ) ಇಲ್ಲ ನಿಗಧಿಪಡಿಸಿರುವುದಿಲ್ಲ.

ಇ) ಇನ್ನೂ ಹಂಚಿರುವುದಿಲ್ಲ.

ಶ್ರೀ ಯು. ಬಿ. ಬಣಕಾರ್ :- ಮಾನ್ಯ ಉಪಾಧ್ಯಕ್ಷರೇ, ಹಿಂದಿನ ಮುಖ್ಯ ಮಂತ್ರಿಗಳು ದಿನಾಂಕ 2-10-95 ರಂದು ಈ ರಾಜ್ಯದ ಪ್ರತಿಯೊಂದು ದಿನಪತ್ರಿಕೆಯಲ್ಲಿ ದೊಡ್ಡ ಜಾಹಿರಾತು ಕೊಟ್ಟರು. 483 ಕೋಟಿ ರೂಪಾಯಿಗಳ ಒಂದು ಐತಿಹಾಸಿಕ ಯೋಜನೆಯನ್ನು ಪ್ರಾರಂಭ ಮಾಡುತ್ತಿದ್ದೇವೆ, ಆದರಲ್ಲಿ ರಾಜ್ಯ ಸರ್ಕಾರ ಗ್ರೂಪ್ (ಡಿ) ವರ್ಗದ ನೌಕರರಿಗೆ 30 x 40 ಅಡಿ ಅಳತೆಯ 50 ಸಾವಿರ ನಿವೇಶನಗಳನ್ನು ರಿಯಾಯಿತಿ ದರದಲ್ಲಿ ನೀಡುತ್ತೇವೆ. ಎಂದು ಘೋಷಣೆ ಮಾಡಿದರು. ಆದರೆ ಇವತ್ತಿನವರೆಗೂ ಒಂದೂ ನಿವೇಶನವನ್ನು ಹಂಚಲಾಗಿಲ್ಲ. ಕಾರಣ ಏನು? ಆಥವಾ ಹಣ ಇಲ್ಲದೇ ಈ ರೀತಿಯ ಯೋಜನೆಗಳನ್ನು ಘೋಷಣೆ ಮಾಡಿದ್ದಾರೆಯೇ?